Basic Seed Farm near Kurubarahally in Doddaballapur.

Q.—175. Sri C. RANGE GOWDA (Magadi).—

Will the Government be pleased to state :—

(*a*) whether any land has been acquired to start a Basic Seed Farm near Kurubarahally in Doddaballapur Taluk ;

(*b*) the extent of land acquired and when it was acquired and at what cost ;

(*c*) the target of production in the III Five-Year Plan and achievement so far yearwise ?

A.—Sri H. C. BORAIAH (Parliamentary Secretary to Minister for Agriculture).—

(*a*) No.

(*b*) Does not arise.

(*c*) Does not arise.

Member's Representation

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ಪಾಮಿ, ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಹಣಕಾಸಿನ ಸಚಿವರು ಇವತ್ತು ಮದ್ರಾಸಿಗೆ ಹೋಗುತ್ತಾ ಇದ್ದಾರೆ. ಮದ್ರಾಸಿನಲ್ಲಿ ವಿತ್ತೀಯ ಆಯೋಗದ (ಫೈನಾನ್ಸ್ ಕಮಿಷನ್) ಭೇಟಿ ಮಾಡಿ ರಾಜ್ಯದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಈಗಾಗಲೇ ಸಲ್ಲಿಸಿರುವ ಮನವಿಯ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುತ್ತಿದ್ದಾರೆ ಎಂದು ಪತ್ರಿಕೆ ವರದಿ ಓದಿ ನಾನು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ನಾವು ಈಗ ಈ ಮಾನ್ಯ ಸಭೆಯಲ್ಲಿ ರಾಜ್ಯದ ಈ ವರ್ಷದ ಆಯವ್ಯಯ ಪಟ್ಟಿಯ ಬಗ್ಗೆ ಚರ್ಚೆ ಮಾಡುತ್ತಾ ಇರುವುದರಿಂದ ಮಾನ್ಯ ಹಣಕಾಸಿನ ಸಚಿವರು ಮಾನ್ಯ ಮುಖ್ಯ ಮಂತ್ರಿಗಳು ಈ ಮನೆಯ ವಿಶ್ವಾಸವನ್ನು ಪಡೆದುಕೊಂಡು ಹೋಗಿ ಅಲ್ಲ ಚರ್ಚೆ ಮಾಡುವುದು ಸೂಕ್ತ ಎಂದು ನನಗೆ ಕಾಣುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯದಲ್ಲಿ.....

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಏನು ಮಾಡಬೇಕು ಎಂದು ಹೇಳುತ್ತೀರಿ ?

ಶ್ರೀ ಎಸ್. ಗೋಪಾಲಗೌಡ.—ಈಗಾಗಲೇ ಸಲ್ಲಿಸಿರುವ ಮನವಿಯ ಬಗ್ಗೆ ಈ ಮಾನ್ಯ ಸಭೆಗೆ ಮನವಿಯ ಅಂಶಗಳನ್ನು ತಿಳಿಸುವುದಲ್ಲದೆ ಈಗ ಚರ್ಚೆ ಮಾಡತಕ್ಕದ್ದು .....

Mr. SPEAKER.—What does it mean ? Will the member kindly resume his seat. Is it to be disclosed ? The matter that is being raised by the Hon'ble member is not in the agenda. I thought that he is making valuable suggestions. But he is suggesting that the memorandum given to the Finance Commission should be disclosed before it is discussed with the Commission. He is disturbing the Business of the House for purposes of this kind. The Hon'ble member should not do that.

ಶ್ರೀ ಎಸ್. ಗೋಪಾಲ ಗೌಡ.—ನಾನು ಹೇಳುವುದೇನೆಂದರೆ ಮದ್ರಾಸಿಗೆ ಚರ್ಚೆಗೆ ಹೋಗುವ ಕಾರ್ಯಕ್ರಮ ಗೊತ್ತಾಗಿದೆ. ಇಂಥ ಸಂದರ್ಭದಲ್ಲಿ ಅವರು ಒಂದು ಹೇಳಿಕೆ ಕೊಡುವುದಕ್ಕೆ ತೊಂದರೆ ಇಲ್ಲ. ಒಂದು ಹೇಳಿಕೆ ಈ ಮಾನ್ಯ ಸಭೆಗೆ ಕೊಡುವುದು ಉಚಿತ ಎಂದು ನಾನು ಭಾವಿಸುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ವಿಚಾರ ಮಾಡದೆ ಹೇಳುವುದು ತಪ್ಪು. ಈಗ ಅದರ ಬಗ್ಗೆ ಹೇಳುವುದಕ್ಕಾಗುವುದಿಲ್ಲ. ಅಲ್ಲಿಗೆ ಹೋಗಿ ಬಂದ ಮೇಲೆ ಹೇಳಬಹುದು.

Mr. SPEAKER.—Tomorrow during the discussion, if both the Chief Minister and the Finance Minister are absent, proper arrangements have to be made.

Sri S. NIJALINGAPPA.—Yes, Sir, we have made proper arrangements.

BUDGET ESTIMATES FOR 1965-66.

General discussion (not concluded)

2-00 P. M.

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಗಳೇ, ಮಾನ್ಯ ಅರ್ಥ ಸಚಿವರು ಈಗ ನಮ್ಮ ಸಭೆಯ ಮುಂದೆ 1965-66 ನೇ ಸಾಲಿಗೆ ಸಂಬಂಧಪಟ್ಟ ಬಜೆಟ್ಟನ್ನು ಮಂಡಿಸಿದ್ದಾರೆ. ಇವರು ಸಭೆಯ ಮುಂದೆ ಮಂಡಿಸಿರತಕ್ಕ ಬಜೆಟ್ಟಿನ ಬಗ್ಗೆ ನಾನು ಒಂದೇ ವಾಕ್ಯದಲ್ಲಿ ಹೇಳುವುದಾದರೆ ಈ ಅರ್ಥ ಸಚಿವರು ಮಂಡಿಸಿರತಕ್ಕ ಬಜೆಟ್ ನಮ್ಮ ದೇಶ ಈ ದಿವಸ ಎಷ್ಟು ನಿರಾಶ ನಿರುತ್ಸಾಹ ನಿಸ್ತೇಜದಿಂದ ಕೂಡಿದ್ದಾಗಿ ದೇಶದ ಪೂರ್ಣ ಚಿಂತಾಜನಕ ಪರಿಸ್ಥಿತಿಯನ್ನು ವ್ಯಕ್ತಪಡಿಸತಕ್ಕ ಒಂದು ದೊಡ್ಡ ಪಟ್ಟಿ ಆಗಿದೆ ಎಂಬುದಾಗಿ ಹೇಳಬಹುದು. ಈಗ ನಮ್ಮ ಅರ್ಥ ಸಚಿವರು ಮಂಡಿಸಿರತಕ್ಕ ಚಿಂತಾಜನಕ ಆಯವ್ಯಯ ಪಟ್ಟಯ ವಿಷಯವಾಗಿ ನಾವೀದಿವಸ ನಮ್ಮ ಸರ್ಕಾರ ಇಂಥ ಒಂದು ಚಿಂತಾಜನಕ ಪರಿಸ್ಥಿತಿಯಲ್ಲದೆಯಲ್ಲಾ ಎಂದು ನಾವು ನಮ್ಮ ಅನುತಾಪವನ್ನು ವ್ಯಕ್ತಪಡಿಸಬೇಕೇ ಅಥವಾ ಬೇಡವೇ ಎಂಬುದನ್ನು ನಾವು ತೀವ್ರವಾಗಿ ಆಲೋಚನೆ ಮಾಡಬೇಕಾಗಿದೆ.

ಈ ದಿವಸ ನಮ್ಮ ರಾಜ್ಯದ ವರಮಾನ ಅಂದರೆ, ಮುಂದಿನ ಸಾಲಿಗೆ 1965-1966ಕ್ಕೆ 12,151.69 ಲಕ್ಷ ರೂಪಾಯಿಗಳ ವರಮಾನವೂ ಮತ್ತು 12,542,93 ಲಕ್ಷ ರೂಪಾಯಿಗಳ ವೆಚ್ಚವೂ ಇದ್ದು, ನಮ್ಮ ಆಯವ್ಯಯವು ಸುಮಾರು 391.24 ಲಕ್ಷ ರೂಪಾಯಿಗಳ ಖೋತಾ ಬಜೆಟ್ಟಾಗಿರುತ್ತದೆಂದು ಅವರು ತಿಳಿಸಿದ್ದಾರೆ. ಈ ಹಿಂದೆ ನಾನು ಇದೇ ಬಜೆಟ್ ಅಧಿವೇಶನದ ಕಾಲದಲ್ಲಿ ಮಾನ್ಯ ಆರ್ಥಿಕ ಸಚಿವರು ಕಳೆದ ಸಾಲಿನ ಬಜೆಟ್ಟನ್ನು ಮಂಡಿಸಿದ್ದ ಕಾಲಕ್ಕೆ ಅವರು 7 ಲಕ್ಷ ರೂಪಾಯಿಗಳ ಸರ್‌ಪ್ಲಸ್ ಬಜೆಟನ್ನು ಸಭೆಯ ಮುಂದೆ ಮಂಡಿಸಿದ್ದಾಗ ನಾನು ಅದು ನಿಜವಾಗಿಯೂ ಸರ್‌ಪ್ಲಸ್ ಬಜೆಟ್ಟಲ್ಲ, ಇವರು ನಿಜಪರಿಸ್ಥಿತಿಯನ್ನು ಇಲ್ಲಿ ನಿರೂಪಿಸಿಲ್ಲ ಇದು ಖಂಡಿತವಾಗಿಯೂ ಖೋತಾ ಬಜೆಟ್ಟೇ ಎಂಬುದಾಗಿ ತಿಳಿಸಿದ್ದೇನೆ. ಹಾಗೆ ನಾನು ಕಳೆದ ಸಾಲಿನಲ್ಲಿ ಏನು ಹೇಳಿದ್ದೆನೋ ಆ ನಿಜಸ್ವರೂಪವನ್ನೇ ಈ ದಿವಸ ಮಾನ್ಯ ಆರ್ಥಿಕ ಸಚಿವರು ಸಭೆಯ ಮುಂದಿಟ್ಟಿದ್ದಾರೆ. ಆದರೆ ಅವರು ಹಿಂದಿನ ಸಾಲಿನಲ್ಲಿ ಬಜೆಟ್ಟನ್ನು ಮಂಡಿಸುವಾಗ ಈ ಸಾಲಿಗೆ 111 ಕೋಟಿ ರೂಪಾಯಿಗಳ ಆದಾಯವನ್ನೂ ಮತ್ತು 109 ಚಿಲ್ಲರೆ ಕೋಟಿ ವೆಚ್ಚವನ್ನೂ ಅಂದಾಜು ಮಾಡಿದ್ದರು. ಆದರೆ ಅವರೆ ಅಂದಾಜು ತಪ್ಪಿ ಹೋಗಿ ಬರಬೇಕಾಗಿದ್ದ ಆದಾಯ 111 ಕೋಟಿಗೆ ಬದಲು 100 ಕೋಟಿಗಿಳಿಯುತು. ಅದಕ್ಕೆ ತಕ್ಕಂಥ ಖರ್ಚು ನಿರೀಕ್ಷಿಸಿದ್ದುದಕ್ಕಿಂತ ಅಂದರೆ 109 ಕೋಟಿಯ ಬದಲು ಅದು 112 ಕೋಟಿಗೇ ಕೋಟಿಗೇರಿತು. ಹೀಗಾಗಿ ಅದು 15 ಲಕ್ಷ ಖೋತಾ ಬಜೆಟ್ಟಾಯಿತು. ಅಂದರೆ ಇದು ಏನನ್ನು ಸೂಚಿಸುತ್ತಿದೆ ಎಂದರೆ, ಸರ್ಕಾರದವರಿಗೆ ಸರಿಯಾದ ವಿವೇಚನೆಯನ್ನಿಟ್ಟುಕೊಂಡು ಈ ಬಜೆಟ್ಟನ್ನು ತಯಾರಿಸುವುದಕ್ಕೆ ಬರುವುದಿಲ್ಲವೆಂಬುದನ್ನು ಇದು ಸೂಚಿಸುತ್ತದೆ. ಇವರಿಗೆ ಶಾಸ್ತ್ರೀಯವಾದ ರೀತಿಯಲ್ಲಿ ಬಜೆಟ್ಟನ್ನು ತಯಾರಿಸುವುದಕ್ಕೆ ಬರುವುದಿಲ್ಲವೆಂಬುದನ್ನು ಇದು ಎತ್ತಿ ತೋರಿಸುತ್ತಿದೆ. ಅಂತೂ ನಾವು ಹಿಂದಿನಿಂದಲೂ ಹೇಳುತ್ತಿದ್ದ ಹಾಗೆ ಈ ಸರ್ಕಾರ ದೇಶದ ಹಣ ಕಾಸಿನ ಪರಿಸ್ಥಿತಿಯನ್ನು ಇಂಥ ಒಂದು ಚಿಂತಾಜನಕ ಮಟ್ಟಕ್ಕೆ ತಂದು ನಿಲ್ಲಿಸಿದೆ. ಈ ವಿಚಾರವಲ್ಲಿ ಮಾನ್ಯ ಮಂತ್ರಿಗಳೇ ತಮ್ಮ ವರದಿಯಲ್ಲಿ ಪೀಠಿಕಾರೂಪವಾಗಿ ಹೀಗೆ ಹೇಳಿದ್ದಾರೆ.

[Mr. DEPUTY SPEAKER in the Chair].

> "The heavy investments on developmental activities during the successive Plans without appreciable returns immediately, the mounting expenditure on Welfare Departments coupled with the growing debt burden,..."